

ಮೈಸೂರಿನಲ್ಲಿ ಜನ ಸಂಗ್ರಾಮ ಪರಿಷತ್ ೨ನೇ ರಾಜ್ಯ ಸಮ್ಮೇಳನವನ್ನು ಹಿರಿಯ ಸಾಹಿತಿ ದೇವನೂರ ಮಹಾದೇವ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು. ಎಸ್.ಆರ್.ಹಿರೇಮಠ, ಎ.ಟಿ.ರಾಮಸ್ವಾಮಿ, ಕೃಷ್ಣ, ಗಂಗಾಧರ ಕುಷ್ಟಗಿ, ರಾಘವೇಂದ್ರ ಕುಷ್ಟಗಿ, ನಂದಿನಿ ಜಯರಾಂ, ಬಡಗಲಪುರ ನಾಗೇಂದ್ರ, ಸಿ.ಯತಿರಾಜು ಮತ್ತಿತರರು ಚಿತ್ರದಲ್ಲಿದ್ದಾರೆ.





ಮೈಸೂರಿನಲ್ಲಿ ಆಯೋಜಿಸಿರುವ ಜನ ಸಂಗ್ರಾಮ ಪರಿಷತ್ ೨ನೇ ರಾಜ್ಯ ಸಮ್ಮೇಳನದ ಅಂಗವಾಗಿ ನಗರದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ವೃತ್ತದಿಂದ ವಿವಿಧ ಆದಿವಾಸಿ ಕಲಾತಂಡಗಳೊಂದಿಗೆ ಕಾರ್ಯಕ್ರಮ ನಿಗದಿಯಾಗಿದ್ದ ದಿವಾನ್ ಪೂರ್ಣಯ್ಯ ಸ್ಮಾರಕ ಭವನದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ವಿವಿಧ ಕಲಾ ತಂಡಗಳು ತಮ್ಮ ಸಮುದಾಯದ ಜಾನಪದ ಕಲೆಯನ್ನು ಪ್ರದರ್ಶಿಸಿ ಗಮನ ಸೆಳೆದರು. ಮತ್ತೊಂದೆಡೆ ಎಸ್.ಆರ್.ಹಿರೇಮಠ ಮತ್ತು ನಂದಿನಿ ಜಯರಾಂ ಅವರು ಡ್ರಮ್ ಬಾರಿಸಿ ಸಂಭ್ರಮಿಸಿದ ಕ್ಷಣ.

# ಬೇಕು ಜನಸಮುದಾಯದ ರಚನಾತ್ಮಕ ರಾಜಕಾರಣ

## ಜನ ಸಂಗ್ರಾಮ ಪರಿಷತ್ ಸಮ್ಮೇಳನ ಉದ್ಘಾಟಿಸಿ ದೇವನೂರ ಮಹದೇವ

ಮೈಸೂರು,ಸೆ.೧೧– ಭೂಮಿಯ ಮೇಲಿನ ವಿದ್ಯಮಾನಗಳನ್ನು ನೋಡಿದರೆ, ಯಾವುದು ನಿಜ, ಯಾವುದು ಕಣ್ಕಟ್ಟು ತಿಳಿಯದಂತಾಗಿದೆ. ಪ್ರಪಂಚವೇ ಮಾಯಾಬಜಾರ್ ಸಿನಿಮಾದಂತಾಗಿ ಬಿಟ್ಟಿದೆ. ಈ ಸನ್ನಿವೇಶದಲ್ಲಿ ಸುಮ್ಮನಿರುವ ಜನ ಸಮುದಾಯದ ಒಳಗಿಂದ ರಚನಾತ್ಮಕ ರಾಜಕಾರಣವೊಂದನ್ನು ಭಾರತ ಎದುರು ನೋಡುತ್ತಿದೆ ಎಂದು ಹಿರಿಯ ಸಾಹಿತಿ, ಚಿಂತಕ ದೇವನೂರ ಮಹಾದೇವ ಹೇಳಿದರು.

ನಗರದ ಎಂ.ಜಿ.ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಸ್ಮಾರಕ ಭವನದಲ್ಲಿ ೨ ದಿನಗಳು ನಡೆಯಲಿರುವ ಜನ ಸಂಗ್ರಾಮ ಪರಿಷತ್ ೨ನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಶುಕ್ರವಾರ ಉದ್ಘಾಟಿಸಿದ ನಂತರ ಅವರು ಮಾತನಾಡಿ, ನಿಸರ್ಗವನ್ನೂ ಸೇರಿದಂತೆ ಜೀವನದ ಎಲ್ಲಾ ಕ್ಷೇತ್ರಗಳನ್ನೂ, ಹಾಗೆಯೇ ಇಂದು ಹುಟ್ಟುವ ಕೂಸನ್ನೂ ಬಿಡದಂತೆ ಎಲ್ಲರ ಕುತ್ತಿಗೆಗೂ ಹಗ್ಗ ಬಿಗಿದು ಈ ಮಾಯಾಬಜಾರ್ ಹಿಡಿದುಕೊಂಡಿದೆಯೇನೋ ಅನಿಸುವಷ್ಟು ಪ್ರಬಲವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಬಂಡವಾಳ ಹೂಡಿಕೆಯ ಹಸಿವು ಹೆಚ್ಚಾಗಬೇಕು ಎಂದಿದ್ದಾರೆ. ಭಗವಂತ ಎಂತೆಂತಹ ಹಸಿವು ಕೊಟ್ಟಿದ್ದಾನೆ. ಆದರೆ, ಇದು ಹಿಂಗದ ಹಸಿವು. ಅಂದರೆ ಬಕಾಸುರ ಬಂಡವಾಳದಂತೆ, ಆಹಾರ ಕೊಟ್ಟವರನ್ನೂ ನುಂಗಿ ನೀರು ಕುಡಿಯುವ ದೈತ್ಯ ಹಸಿವು ಅದು. ಇದು ಪ್ರಜಾತಂತ್ರ ವ್ಯವಸ್ಥೆಯ ಕುತ್ತಿಗೆ ಹಿಚುಕುತ್ತಿದೆ. ಅದಕ್ಕೆ ಬಿಬಿಎಂಪಿಯ ಅಧಿಕಾರ ಹಿಡಿಯುವುದಕ್ಕಾಗಿ ನಡೆದ ಡೀಲ್ ಉದಾಹರಣೆಯಾಗಿದೆ ಎಂದು ಮಹಾದೇವ ತೀಕ್ಷ್ಣವಾಗಿ ನುಡಿದರು.

ದೊಂಬರ ಸಮುದಾಯದಲ್ಲಿ ಸಾಮೂಹಿಕ ಪರ ಮಾಡುತ್ತಾರೆ. ಅಲ್ಲಿನ ಪಂಕ್ತಿ ಊಟಕ್ಕೆ ಬರಲಾಗದವರಿಗೆ ಜೋಪಡಿಗಳಿಗೆ ಅವರ ಪಾಲು ಕಳಿಸುತ್ತಾರೆ. ಗರ್ಭಿಣಿಯರಿದ್ದರೆ ಗರ್ಭದಲ್ಲಿರುವ ಶಿಶುವನ್ನೂ ಪರಿಗಣಿಸಿ ಎರಡು ಪಾಲು ನೀಡುತ್ತಾರಂತೆ. ಇಂತಹ ವಿವೇಕಯುತವಾದ ಯಜಮಾನನೊಬ್ಬ ಭೂಮಿಗೆ ತುರ್ತಾಗಿ ಬೇಕಾಗಿದ್ದಾನೆ. ಯಾಕೆಂದರೆ ಭೂಮಿ ಬಾಲಂಗೋಚಿ ಮತ್ತು ಸೂತ್ರವಿಲ್ಲದ ಪಟದಂತಾಗಿಬಿಡುವ ಆತಂಕದಲ್ಲಿದೆ ಎಂದು ಅವರು ತಿಳಿಸಿದರು.

ಷೇರುಪೇಟೆಯಂತೆ ಇನ್ನೊಂದು ಏರಿಳಿತ ಇದೆ. ಅದೇ ಜಿಡಿಪಿ (ಒಟ್ಟು ದೇಶೀಯ ಉತ್ಪನ್ನ)ಗೂ ಕಣ್ಣಿಲ್ಲ, ಹೃದಯ ಇಲ್ಲ. ಈ ಜಿಡಿಪಿ ಎಂಬ ಹುಚ್ಚು ಕುದುರೆ ಏರಿ ಅದು ಕೊಂಡೊಯ್ಯುವತ್ತ ಹೋಗುತ್ತಿದ್ದೇವೆ. ಆದರೆ, ಸವಾರಿ ಮಾಡುತ್ತಿರುವ ಭ್ರಮೆಯಲ್ಲಿದ್ದೇವೆ ಎಂದರು.

ಜನ ಸಂಗ್ರಾಮ ಪರಿಷತ್ ನಡೆದು ಬಂದ ದಾರಿ–ಗುರಿ ಪುಸ್ತಕವನ್ನು ಮಾಜಿ ವಿಧಾನಸಭಾಧ್ಯಕ್ಷ ಕೃಷ್ಣ ಬಿಡುಗಡೆ ಮಾಡಿದರು. ಪರಿಷತ್ ಉಪಾಧ್ಯಕ್ಷ ಸಿ.ಯತಿರಾಜು, ಚಂದ್ರಕಾಂತ ವಡ್ಡು ಠರಾವು ಮಂಡಿಸಿದರು. ಪರಿಷತ್ ಅಧ್ಯಕ್ಷ ಎಸ್.ಆರ್.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ, ಸಾರ್ವಜನಿಕ ಭೂ ಕಬಳಿಕೆ ವಿರೋಧಿ ಹೋರಾಟಗಾರ ಎ.ಟಿ. ರಾಮಸ್ವಾಮಿ, ಗಂಗಾಧರ ಕುಷ್ಟಗಿ ಮಾತನಾಡಿದರು. ಪರಿಷತ್ ಕಾರ್ಯಾಧ್ಯಕ್ಷ ರಾಘವೇಂದ್ರ ಕುಷ್ಟಗಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಪ್ರಧಾನ ಕಾರ್ಯದರ್ಶಿ ಬಡಗಲಪುರ ನಾಗೇಂದ್ರ, ವಿ.ಎ.ಮಾಲಿ ಪಾಟೀಲ್, ಎಂ.ಸಿ. ಚಿಕ್ಕಣ್ಣ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ದೇವಾನಂದ ವರಪ್ರಸಾದ್ ಮತ್ತು ಸಂಗಡಿಗರು ಹೋರಾಟದ ಗೀತೆಗಳನ್ನು ಹಾಡಿದರು. ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷೆ ನಂದಿನಿ ಜಯರಾಂ ಸ್ವಾಗತಿಸಿದರು. ಪರಿಷತ್ ರಾಜ್ಯ ಸಮಿತಿ ಸದಸ್ಯ ಡಾ.ಎಂ.ಪಿ.ವರ್ಷ ನಿರೂಪಿಸಿದರು. ವಿಭಾಗೀಯ ಕಾರ್ಯದರ್ಶಿ ಪ್ರಸನ್ನ ವಂದಿಸಿದರು.

ನಂತರ ಕೃಷಿ ಸಂಕಟ ಮತ್ತು ರೈತರ ಆತ್ಮಹತ್ಯೆಗಳು ಹಾಗೂ ಆದಿವಾಸಿಗಳ ಹಕ್ಕುಗಳ ಸಂರಕ್ಷಣೆ– ಸಾರ್ವಜನಿಕ ನೀತಿ ಅನುಷ್ಠಾನ ಮತ್ತು ಒಕ್ಕಲೆಬ್ಬಿಸುವಿಕೆ ವಿಷಯ ಕುರಿತು ಪ್ರತ್ಯೇಕ ಗೋಷ್ಠಿಗಳು ನಡೆದವು.




**ನಾವೆಲ್ಲ ಒಗ್ಗಟ್ಟಾಗಿ ಹೋರಾಡೋಣ..... ಮೈಸೂರಿನಲ್ಲಿ ಆಯೋಜಿಸಿದ್ದ ಜನ ಸಂಗ್ರಾಮ ಪರಿಷತ್‌ನ ೨ನೇ ಸಮ್ಮೇಳನದ ಹಿನ್ನೆಲೆಯಲ್ಲಿ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಗಣ್ಯರೆಲ್ಲರೂ ಒಟ್ಟಾಗಿ ಜೆಎಸ್‌ಎಸ್ ವಿದ್ಯಾಪೀಠದ ಬಳಿಯಿರುವ ಬಸವೇಶ್ವರರ ಪ್ರತಿಮೆ ಬಳಿ ಕ್ಯಾಮರಾಗೆ ಕಾಣಿಸಿಕೊಂಡ ಪರಿ ಸಾಮಾಜಿಕ ಸಮಸ್ಯೆಗಳು ಹಾಗೂ ಪಶ್ಚಿಮ ಘಟ್ಟಗಳ ರಕ್ಷಣೆಗಾಗಿ ಎಲ್ಲರೂ ಒಟ್ಟಾಗಿ ಹೋರಾಡುವ ಎನ್ನುವ ಸಂದೇಶವನ್ನು ಧ್ವನಿಸುತ್ತಿತ್ತು.**

## ‘ರೈತರ ಆತ್ಮಹತ್ಯೆ ತಡೆಗೆ ಬೇಕು ಶಾಶ್ವತ ಪರಿಹಾರ

ಮೈಸೂರು,ಸೆ.೧೧–ರೈತರ ಆತ್ಮಹತ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕು ಎಂದು ಜನ ಸಂಗ್ರಾಮ ಪರಿಷತ್‌ನ ೨ನೇ ರಾಜ್ಯ ಸಮ್ಮೇಳನದಲ್ಲಿ ಠರಾವು ಪಾಸ್ ಮಾಡಲಾಗಿದೆ.

ನಗರದ ದಿವಾನ್ ಪೂರ್ಣಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ನಡೆದ ಸಮ್ಮೇಳನದಲ್ಲಿ ಚಂದ್ರಕಾಂತ ವಡ್ಡು ಇದನ್ನು ಮಂಡಿಸಿದರು.

ರೈತರ ಆತ್ಮಹತ್ಯೆಯಿಂದಾಗಿ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಕೃಷಿ ಬಿಕ್ಕಟ್ಟಿಗೆ ಸಂಬಂಧಿಸಿದ ಕಾರಣಗಳು ಹಲವು ಆಯಾಮಗಳನ್ನು ಹೊಂದಿದ್ದು, ಈ ಸಮಸ್ಯೆ ಬಗ್ಗೆ ದೂರದೃಷ್ಟಿಕೋನದ ನೀತಿಯನ್ನು ಸರ್ಕಾರ ತಾಳಬೇಕು.

ಕಾರ್ಪೊರೇಟ್ ವಲಯದ ಹಿಡಿತಕ್ಕೆ ಕೃಷಿ ರಂಗವು ಸಿಲುಕಿರುವುದರಿಂದ ಇಷ್ಟೆಲ್ಲ ಅವಾಂತರಗಳಾಗುತ್ತಿವೆ. ಆದ್ದರಿಂದ ಸರ್ಕಾರವು ಕಾರ್ಪೊರೇಟ್ ಪರವಾದ ತನ್ನ ನೀತಿ–ನಿಯಮವನ್ನು ರೈತರ ಪರವಾಗಿ ಬದಲಾಯಿಸಿಕೊಳ್ಳುವ ಮೂಲಕ ಕೃಷಿ ಸಮುದಾಯದ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

## ಜೀವಕ್ಕೆ ಬೆಲೆ ಕೊಡದು ಹಣ

ಹೂಡಿಕೆ ಹಸಿವು ಹೆಚ್ಚಾಗಬೇಕು ಎಂಬುದು ಎಂತಹ ಅನರ್ಥಕ್ಕೆ ಕಾರಣವಾಗಬಲ್ಲದು ಎಂಬುದಕ್ಕೆ ಇಲ್ಲೊಂದು ನಿದರ್ಶನವಿದೆ. ತಾಯಿ ದುಬೈನಲ್ಲಿ, ತಂದೆ ಹೊಸದಿಲ್ಲಿಯಲ್ಲಿ ತಾನು ಅಜ್ಜಿ ಜೊತೆ ಇದ್ದ ಸ್ವರಣಿಮ್ ಎಂಬ ಹೆಸರಿನ ಹುಡುಗ, ತನ್ನ ಹುಟ್ಟುಹಬ್ಬದ ಮುನ್ನಾದಿನ ನೇಣು ಹಾಕಿಕೊಂಡು ಪ್ರಾಣ ಬಿಡುವ ಮೊದಲು ಬರೆದಿಟ್ಟ ಕಾಗದದಲ್ಲಿ, ಸಂಬಂಧಗಳಿಗಿಂತ ಹಣಕ್ಕೆ ಮಹತ್ವ ನೀಡುವ ಈ ಜಗತ್ತಿನಲ್ಲಿ ನಾನು ಬದುಕ ಬಯಸುವುದಿಲ್ಲ ಎಂಬ ಸಾಲುಗಳಿದ್ದವು. ಸಂವೇದನ ಶೀಲರಾದರೆ ಬದುಕು ಇಲ್ಲಿಗೆ ಬಂದು ನಿಲ್ಲುತ್ತದೆ.

**-ದೇವನೂರ ಮಹಾದೇವ**

**ಮೆರವಣಿಗೆ:** ಸಮ್ಮೇಳನದ ಅಂಗವಾಗಿ ನಗರದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ವೃತ್ತದಿಂದ ವಿವಿಧ ಆದಿವಾಸಿ ಕಲಾತಂಡಗಳೊಂದಿಗೆ ಕಾರ್ಯಕ್ರಮ ನಿಗದಿಯಾಗಿದ್ದ ದಿವಾನ್ ಪೂರ್ಣಯ್ಯ ಸ್ಮಾರಕ ಭವನದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು.



ಜನ ಸಂಗ್ರಾಮ ಪರಿಷತ್‌ನ ಕಲಾ ತಂಡಗಳ ಮೆರವಣಿಗೆಯಲ್ಲಿ ಗಮನ ಸೆಳೆದ ಬುಡಕಟ್ಟು ಜನಾಂಗವೊಂದರ ಡ್ರಮ್ ವಾದ್ಯ ಮೇಳ.

## ಸರ್ಕಾರಗಳು ತಗ್ಗಿ ಬಗ್ಗ ಬೇಕಿದೆ

ಪ್ರಜಾಪ್ರಭುತ್ವ ವ್ಯವಸ್ಥೆ ಹಾಳಾಗಿದೆ. ಇಲ್ಲಿ ರಾಜಕೀಯ ಪಕ್ಷಗಳ ಜವಾಬ್ದಾರಿ ದೊಡ್ಡದಿದೆ. ರಾಜ್ಯದ ಅಭಿವೃದ್ಧಿ ಪಥ ಸರಿಯಾದ ದಿಕ್ಕಿನಲ್ಲಿ ಚಲಿಸದೆ ಎಲ್ಲರೂ ಭ್ರಷ್ಟರಾಗಿದ್ದಾರೆ. ಇದರ ಬಗ್ಗೆ ರಾಷ್ಟ್ರೀಯ ಚರ್ಚೆ ಆಗಬೇಕು. ಜನರು ಹೋರಾಟ ಮಾಡಿದರೆ ಮಾತ್ರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಗ್ಗಿಬಗ್ಗಿ ನಡೆಯುವಂತೆ ಮಾಡಬಹುದು. ಈ ಬಗ್ಗೆ ಚಿಂತನೆ ನಡೆಯಬೇಕು.

-ಕೃಷ್ಣ

## ಜೀತದಾಳಾಗಲಿದ್ದಾರೆ ಕೃಷಿಕರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರಿಗೆ ವಿಶ್ವಾಸದ್ರೋಹ ಮಾಡಿದ್ದಾರೆ. ಭೂ ಸುಧಾರಣಾ ಕಾಯ್ದೆ ೧೯೬೪–೭೯ಕ್ಕೆ ತಿದ್ದುಪಡಿ ತಂದು, ಬೇಸಾಯದ ಭೂಮಿಯನ್ನು ಖರೀದಿಸಲು ಇದ್ದ ಕೃಷಿಯೇತರ ಆದಾಯ ಮಿತಿಯನ್ನು ೨ ಲಕ್ಷ ರೂ.ಗಳಿಂದ ೨೫ ಲಕ್ಷ ರೂ.ಗೆ ಹೆಚ್ಚಳ ಮಾಡುವ ಮೂಲಕ ಭೂಗಳ್ಳರಿಗೆ ಅವಕಾಶ ಕಲ್ಪಿಸಿದ್ದಾರೆ. ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರು ಕೂಡ ಅದನ್ನು ಸಮರ್ಥಿಸಿಕೊಂಡು, ಬೇಸಾಯಕ್ಕೆ ಉತ್ತೇಜನ ನೀಡಿದಂತಾಗುತ್ತದೆ ಎಂದಿದ್ದಾರೆ. ಆದರೆ, ನಿಜವಾದ ಕೃಷಿಕರನ್ನು ಭೂ ಮಾಲೀಕರಲ್ಲಿಗೆ ಜೀತಕ್ಕೆ ಕಳುಹಿಸುವುದು ಅವರ ಉದ್ದೇಶವಿರಬೇಕು.

-ಎ.ಟಿ.ರಾಮಸ್ವಾಮಿ

## ವಿನಾಶದ ಅಂಚಿಗೆ ಸಂಬಂಧ

ಸಮಾಜ, ಸಂಸ್ಕೃತಿ, ಪ್ರಕೃತಿ ಇವುಗಳು ವಿನಾಶದ ಅಂಚಿಗೆ ತಲುಪುತ್ತಿವೆ. ಭ್ರಷ್ಟಾಚಾರ ಕ್ಯಾನ್ಸರ್ ಹಾಗೆ ಎಲ್ಲೆಡೆ ಬೆಳೆದಿದೆ. ನ್ಯಾಯಾಂಗ, ಶಾಸಕಾಂಗಗಳು ಸಾರ್ವಜನಿಕರ ನಂಬಿಕೆ ಕಳೆದುಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಜಯಪ್ರಕಾಶ್ ನಾರಾಯಣ್ ಅವರ ತತ್ವಾದರ್ಶಗಳ ಅಡಿಯಲ್ಲಿ ಹೋರಾಟ ಅಗತ್ಯ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು.

-ಎಸ್.ಆರ್.ಹಿರೇಮಠ

## ‘ಎಂಎನ್‌ಸಿಗೆ ಕೃಷಿ ಲಾಭ’

ಮೈಸೂರು: ಕೃಷಿ ಕಾರ್ಪೊರೇಟೀಕರಣಕ್ಕೆ ಪೂರಕ ಪ್ರಕ್ರಿಯೆ ನಡೆಯುತ್ತಿದೆ. ರೈತರು ಮಾಡುವ ಬೇಸಾಯದ ಎಲ್ಲ ಲಾಭವೂ ಬಹುರಾಷ್ಟ್ರೀಯ ಕಂಪನಿಗಳಿಗೆ ಸೇರುತ್ತಿದೆ ಎಂದು ಜನ ಸಂಗ್ರಾಮ ಪರಿಷತ್ ಉಪಾಧ್ಯಕ್ಷ ಸಿ.ಯತಿರಾಜು ಹೇಳಿದರು.

ಜನ ಸಂಗ್ರಾಮ ಪರಿಷತ್ ೨ನೇ ರಾಜ್ಯ ಮಟ್ಟದ ಸಮ್ಮೇಳನದ ಶುಕ್ರವಾರ ಗೋಷ್ಠಿಯಲ್ಲಿ ‘ಕೃಷಿ ಸಂಕಟ ಮತ್ತು ರೈತರ ಆತ್ಮಹತ್ಯೆಗಳು’ ವಿಷಯ ಕುರಿತು ಮಾತನಾಡಿದ ಅವರು, ಕೃಷಿ, ಆರ್ಥಿಕ ಮತ್ತು ರಾಜಕೀಯ ನೀತಿಗಳು ರೈತರ ಆತ್ಮಹತ್ಯೆಗೆ ಕಾರಣವಾಗಿವೆ. ಇದು ಕೇವಲ ರೈತರ ಆತ್ಮಹತ್ಯೆ ಅಲ್ಲ, ಇಡೀ ಸಮಾಜದ ಆತ್ಮಹತ್ಯೆಯಾಗಿದೆ ಎಂದರು. ಈಗಿನ ಕೃಷಿ ಎಂದರೆ ಕರಡಿ ಮತ್ತು ನರಿ ಸೇರಿ ಮಾಡಿದಂತಿದೆ. ಶ್ರಮವೆಲ್ಲ ಕರಡಿಯದ್ದಾದರೆ, ಲಾಭವೆಲ್ಲ ನರಿಯ ಪಾಲಾಗುತ್ತಿದೆ ಎಂದರು.